ದಿನಾಂಕಃ 20-02-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎಲ್.ಎಸ್.ಡಿ ವಕೀಲರಿಂದ**

1. ನನ್ನ ಮನೆ ಜಮಖಂಡಿಯ ಜೊಳದ ಬಜಾರನಲ್ಲಿದೆ. ನಾನು 10 ನೇ ತರಗತಿ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ಕಾಳುಕಡಿ ವ್ಯಾಪಾರ ಮತ್ತು ರಿಯಲ್-ಎಸ್ಟೆಟ ವ್ಯಪಾರ ಮಾಡುತ್ತೇನೆ. ಕಾಳುಕಡಿ ಅಂಗಡಿಯ ಪರವಾನಿಗೆ ಇದೆ. ರಿಯಲ್-ಎಸ್ಟೆಟ ಪರವಾನಿಗೆ ಇಲ್ಲಾ. ನನ್ನ ಹೆಸರಿಗೆ 2 ½ ಎಕರೆ ಜಮೀನು ಇದೆ. ವಾರ್ಷಿಕ ಎಲ್ಲಾ ಖರ್ಚು ವೆಚ್ಚ ಕಡಿತಗೊಳಿಸಿ ನನಗೆ 10-12 ಲಕ್ಷ ರೂಪಾಯಿ ಆದಾಯ ಇದೆ. ನನ್ನ ಹೆಸರಿನಲ್ಲಿ ಎಚ್.ಡಿ.ಎಫ್.ಸಿ, ಎಸ್-ಬ್ಯಾಂಕ ಮತ್ತು ಅರ್ಬನ ಬ್ಯಾಂಕಗಳಲ್ಲಿ ಖಾತೆಗಳು ಇವೆ. ನಾನು ಆದಾಯ ತೆರಿಗೆ ಪಾವತಿದಾರ ಇದ್ದೇನೆ. ನಾನು ಮಾಡಿರುವ ಹಣಕಾಸಿನ ವ್ಯವಹಾರಗಳ ಬಗ್ಗೆ ನನ್ನ ಆದಾಯ ತೆರಿಗೆಯಲ್ಲಿ ಕಾಣಿಸುತ್ತೇನೆ.

2. ನಾನು ಪ್ರತಿವಾದಿಗಳಿಗೆ 2024 ರಲ್ಲಿ ಕೊಟ್ಟಿರುವ 22,50,000/- ರೂಪಾಯಿಗಳ ವ್ಯವಹಾರದ ಬಗ್ಗೆ ನನ್ನ ಆದಾಯ ತೆರಿಗೆ ಪಾವತಿಯಲ್ಲಿ ನಮೂದಿಸಿಲ್ಲ. ಆಗ ನನ್ನ ಹತ್ತಿರ ಇರುವ 12 ಲಕ್ಷ, ನನ್ನ ತಮ್ಮನ ಕಡೆಯಿಂದ 8 ಲಕ್ಷ ಮತ್ತು ಸ್ನೇಹಿತರ ಕಡೆಯಿಂದ 2 ½ ವರೆ ಲಕ್ಷ ರೂಪಾಯಿಗಳನ್ನು ಪಡೆದು ಒಟ್ಟು ಹಣವನ್ನು ಪ್ರತಿವಾದಿಗಳಿಗೆ ನೀಡಿದ್ದೇನೆ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪತ್ರದಲ್ಲಿ ನಮೂದಿಸಿಲ್ಲ. ಜೂನ-2024 ರಲ್ಲಿ ನನ್ನ ಬಳಿ 10-12 ಲಕ್ಷ ಹಣ ಇತ್ತು. ಸದರಿ ಹಣದಲ್ಲಿ ಸ್ವಲ್ಪ ಹಣ ಎಸ್.ಬ್ಯಾಂಕನಲ್ಲಿ ಮತ್ತು ಉಳಿದ ಸ್ವಲ್ಪ ಹಣ ನನ್ನ ಮನೆಯಲ್ಲಿ ಇತ್ತು. 2017 ರಲ್ಲಿ ಸರ್ಕಾರವು ಯಾವುದೇ ಒಂದು ಹಣಕಾಸಿನ ವ್ಯವಹಾರ ರೂ.3 ಲಕ್ಷ ಕ್ಕಿಂತ ಹೆಚ್ಚು ಇದ್ದರೆ ಅದನ್ನು ಬ್ಯಾಂಕ ಮೂಲಕ ಮಾಡಬೇಕು ಎಂದು ನಿಯಮ ಮಾಡಿತ್ತು ಎಂದರೆ ಸರಿ. ಆ ಪ್ರಕಾರ ನಾನು ಪ್ರತಿವಾದಿಗಳಿಗೆ ಕೊಟ್ಟ ಹಣವನ್ನು ಬ್ಯಾಂಕಿನ ಮೂಲಕ ವರ್ಗಾವಣೆ ಮಾಡಿಲ್ಲ ಎಂದರೆ ಸರಿ, ಕಾರಣ ಪ್ರತಿವಾದಿಗಳು ಹಣವನ್ನು ನಗದು ರೂಪದಲ್ಲಿ ಕೊಡುವಂತೆ ಕೊರಿದ್ದರು. ಒಂದು ವೇಳೆ ರೂ.3 ಲಕ್ಷ ಕ್ಕಿಂತ ಹೆಚ್ಚು ಹಣನಮ್ನು ನಗದು ರೂಪದಲ್ಲಿ ನೀಡಿದರೆ ಆದಾಯ ತೆರಿಗೆ ಇಲಾಖೆಯವರಿಗೆ ಮಾಹಿತಿ

ನೀಡಬೇಕು ಎಂದು ನಿಯಮ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಗಳ ಜೊತೆ ಯಾವದೇ ಕರಾರು ಮಾಡಿಕೊಂಡಿಲ್ಲ ಮತ್ತು ಅವರಿಗೆ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳ ಪರಿಚಯ ಇಲ್ಲಾ ಎಂದರೆ ಸರಿಯಲ್ಲ.

3. ದಿಃ 05-06-2024 ರಂದು ದಾವಾ ಸ್ವತ್ತಿನ ನೋಂದಾಯಿತ ಖರೀದಿ ಕರಾರು ಪತ್ರ ನಾನು ಖೊಟ್ಟಿ ರೀತಿಯಿಂದ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಪ್ರತಿವಾದಿಗಳಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಪವನ ಸಾಳುಂಕೆ ಮತ್ತು ಅಬುಬಕರ ಕಲಬುರ್ಗಿ ನನ್ನ ಸ್ನೇಹಿತರು ಎಂದರೆ ಸರಿಯಲ್ಲ, ಬದಲಾಗಿ ಅವರು ಹಿರಿಯರು. ಇನ್ನೊಬ್ಬರು ಸಾಕ್ಷಿ ಎಸ್.ಎಂ ಕಡ್ಲಿಮಟ್ಟಿರವರು ಸಹಿ ಮಾಡಿದ್ದು ಮತ್ತೊಬ್ಬ ಸಾಕ್ಷಿದಾರರ ಹೆಸರು ಗೊತ್ತಿಲ್ಲ. ನಿಪಿ-1 ರಲ್ಲಿ ಇರುವ ಹೆಬ್ಬಟ್ಟಿನ ಗುರುತು ಹಣಮಂತರವರ ಹೆಬ್ಬಟ್ಟಿನ ಗುರುತು ಆಗಿದೆ. ಸದರಿ ಹಣಮಂತರವರು 1 ನೇ ಪ್ರತಿವಾದಿಯ ಗಂಡ. ಸದರಿ ಹಣಮಂತರವರ ಹೆಸರಿಗೆ ದಾವಾ ಆಸ್ತಿ ಇರುವ ಕಾರಣ ಅವರ ಸಹಿ ಪಡೆದು ನಂತರ ಪ್ರತಿವಾದಿಗಳು ದಾಖಲೆ ಮಾಡಿಕೊಡಬೇಕು ಎಂದು ಕರಾರು ಆಗಿತ್ತು. ದಿಃ 01-06-2024 ರಂದು ಪ್ರತಿವಾದಿಗಳಿಗೆ ರೂ.22,50,000/- ಗಳನ್ನು ಒಮ್ಮೆ ರೋಖ ಕೊಟ್ಟಿದ್ದೇನೆ. ಹಣವನ್ನು ಮೂರು ಜನ ಪ್ರತಿವಾದಿರವರ ಕೈಯಲ್ಲಿ ಕೊಟ್ಟಿದ್ದೇನೆ. ಆಗ ಸದರಿ ವ್ಯವಹಾರ ಮಾಡಿಸಿದ 4 ಜನ ಹಿರಿಯರು ಹಾಜರ ಇದ್ದರು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ರೂ.22,50,000/- ಗಳನ್ನು ಕೊಡುವ ಆರ್ಥಿಕ ಸಾಮರ್ಥ್ಯ ಇಲ್ಲಾ ಎಂದರೆ ಸರಿಯಲ್ಲ. ನನ್ನ ಆರ್ಥಿಕ ಸಾಮರ್ಥ್ಯ ತೋರಿಸುವ ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. ಕಿರಣ ಕುಮಾರ ಉಳ್ಳಾಗಡ್ಡಿ ನನ್ನ ಸ್ನೇಹಿತ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಕಿರಣಕುಮಾರ ಉಳ್ಳಾಗಡ್ಡಿ ಮತ್ತು ಪವನ ಸಾಳುಂಕೆರವರ ಜೊತೆ ಸೇರಿ ಖೊಟ್ಟಿ ಕರಾರು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

4. ಪ್ರತಿವಾದಿಗಳು ದಾವಾ ಆಸ್ತಿಯನ್ನು ಯಾವತ್ತು ಮಾರಾಟಕ್ಕೆ ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ 30 ಲಕ್ಷ ರೂಪಾಯಿ ಹಣಕಾಸಿನ ಅವಶ್ಯಕತೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿ ಮಾರಾಟದ ಬಗ್ಗೆ ನನಗೆ ಯಾವತ್ತು ಹೇಳಿಲ್ಲ ಎಂದರೆ ಸರಿಯಲ್ಲ. 2024 ರಲ್ಲಿ ಪ್ರತಿವಾದಿಗಳ ಮನೆಯಲ್ಲಿ ಮದುವೆ ಇರುವುದಾಗಿ ಹಾಗೂ ಕಿರಣ ಉಳ್ಳಾಗಡ್ಡಿರವರ ಜೊತೆ ನೋಂದಕರಾರು ಇರುವ ಕಾರಣ ಹಣ ಕೊಡಬೇಕಾಗಿದೆ ಎಂದು ತಮ್ಮ ಹಣಕಾಸಿನ ತೊಂದರೆ ಹೇಳಿದ್ದರು. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮಗೆ 22,50,000/- ಲಕ್ಷ ರೂಪಾಯಿ ಹಣದ ಅಡಚಣೆ ಇದೆ ಎಂದು ಹೇಳಿದರು. ಪ್ರತಿವಾದಿಗಳಿಗೆ ಹಣದ ಅಡಚಣೆ ಇರುವ ಬಗ್ಗೆ ಪವನ ಸಾಳುಂಕೆ, ಎಸ್.ಎಂ.ಕಡ್ಲಿಮಟ್ಟಿ ಮತ್ತು ಕಿರಣ ಉಳ್ಳಾಗಡ್ಡಿ ರವರು ಹೇಳಿದ್ದರು. ನಿಪಿ-1 ದಾಖಲೆ ಬರೆಯುವ ಮೊದಲು ಪ್ರತಿವಾದಿಗಳ ಮನೆಯಲ್ಲಿ ವ್ಯವಹಾರ ಮಾತುಕತೆ ವ್ಯವಹಾರ ಆಗಿತ್ತು. ಆ ವೇಳೆಯಲ್ಲಿ ನಿಪಿ-1 ರಲ್ಲಿ ಇರುವ ಸಾಕ್ಷಿದಾರರೆ ಹಿರಿಯರು ಆಗಿದ್ದರು.

5. ನನ್ನ ಹತ್ತಿರ 2024 ರಲ್ಲಿ ಹಣ ಕಡಿಮೆ ಇರುವ ಕಾರಣ ಖರೀದಿ ಪತ್ರ ಮಾಡದೇ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದೆ ಎಂದರೆ ಸರಿ. ದಾವಾ ಆಸ್ತಿ ಜಮಖಂಡಿ ಶಹರದ ಮಧ್ಯಭಾಗದಲ್ಲಿ ಇದ್ದು 2024 ರಲ್ಲಿ ಅಂದಾಜು 80 ಲಕ್ಷ ರೂಪಾಯಿ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಗಳ ಪರಿಚಯ ಈ ವ್ಯವಹಾರದಿಂದ ಮಾತ್ರ ಆಗಿತ್ತು ಎಂದರೆ ಸರಿ. ದಾವಾ ಆಸ್ತಿಗೆ ಪ್ರತಿವಾದಿಗಳು ಕಾನೂನುಬದ್ದ ಮಾಲೀಕರು ಅಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿ ಉತಾರಾ ಮತ್ತು ಇ.ಸಿ ಪರಿಶೀಲಿಸಿ ಪ್ರತಿವಾದಿಗಳು ಮಾಲೀಕರೆಂದು ತಿಳಿದುಕೊಂಡಿದ್ದೇನು. ಪ್ರತಿವಾದಿಗಳು ನನಗೆ ದಾವಾ ಸ್ವತ್ತಿನ ಕರಾರು ಮಾಡಿಕೊಡಲು ಮಾಲಿಕತ್ವ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಯ ಗಂಡ ಹಣಮಂತನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಹಣಮಂತ ದಾವಾ ಆಸ್ತಿಯನ್ನು 1 ರಿಂದ 3 ನೇ ಪ್ರತಿವಾದಿಗೆ ಹಕ್ಕು ಬಿಟ್ಟು ಕೊಟ್ಟಿರುವುದನ್ನು ನೋಡಿ ನಾನು

ಖರೀದಿಸಿದ್ದೇನೆ. ಸದರಿ ದಾಖಲೆ ಹಾಜರಪಡಿಸುತ್ತೆನೆ. ಸದರಿ ವಿಷಯ ಈಗಾಗಲೇ ಉತಾರಾದಲ್ಲಿ ನಮೂದು ಇದೆ.

6. 1 ನೇ ಪ್ರತಿವಾದಿ ಗಂಡ ಹಣಮಂತನ ಹೆಸರು ನಿಪಿ-1 ಕ್ಕೆ ಉದ್ದೇಶ ಪೂರ್ವಕವಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹಣಮಂತರವರ ಸಹಿ ಇಲ್ಲಾ ಕಾರಣ ಅವರು ಮರಾಠಿ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಹಣಮಂತರವರಿಗೆ ಈಗ 80 ವರ್ಷವಯಸ್ಸು ಹಾಗೂ ಅವರು ಬುದ್ದಿ ಮಾಂದ್ಯರಾಗಿದ್ದು ಎಲ್ಲಿಯೂ ಓಡಾಡುವದಿಲ್ಲ ಎಂದರೆ ಸರಿಯಲ್ಲ. ಅವರೇ ಕರೆದುಕೊಂಡು ಬಂದು ನಿಪಿ-1 ಮಾಡಿಸಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಹಣಮಂತರವರಿಗೆ ನಾವು ಯಾವುದೇ ನೋಟಿಸ ನೀಡಿಲ್ಲ. ಸದರಿ ವಿಚಾರ ನನ್ನ ವಾದ ಪತ್ರ ಮತ್ತು ಮುಖ್ಯವಿಚಾರಣೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಪವನ ಸಾಳುಂಕೆ ಪ್ರತಿವಾದಿಗಳ ಹತ್ತಿರದ ಸಂಬಂಧಿ ಎಂದರೆ ಸರಿ. 2024 ರಲ್ಲಿ ಪ್ರತಿವಾದಿಗಳನ್ನುಪವನರವರು ಕಿರಣ ಉಳ್ಳಾಗಡ್ಡಿರವರಿಗೆ ಭೇಟಿ ಮಾಡಿಸಿ 10 ಲಕ್ಷ ರೂಪಾಯಿ ಇಸಿದು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣದ ಭದ್ರತೆಗಾಗಿ ಕಿರಣ ಉಳ್ಳಾಗಡ್ಡಿರವರು ಹಣಮಂತರವರ ಕಡೆ ಒಂದು ಕರಾರು ಪತ್ರ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಕಿರಣ ಕುಮಾರರವರು 12,20,000/- ರೂ ಗಳನ್ನು ಕೊಟ್ಟಿದ್ದೇವೆಂದು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು 4 ತಿಂಗಳ ನಂತರ ಸದರಿ ಹಣವನ್ನು ಕಿರಣ ಕುಮಾರ ಉಳ್ಳಾಗಡ್ಡಿರವರಿಗೆ ಮರುಪಾವತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಪವನ ಸಾಳುಂಕೆ ಮತ್ತು 1 ನೇ ಪ್ರತಿವಾದಿ ಗಂಡ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ 1 ನೇ ಪ್ರತಿವಾದಿ ಗಂಡ ಮರಾಠಿ ಭಾಷೆಯಲ್ಲಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

7. ಕಿರಣ ಉಳ್ಳಾಗಡ್ಡಿರವರು ತಮಗೆ ಪ್ರತಿವಾದಿಗಳು ಹಣ ಮರುಪಾವತಿಸಿದರೆ ಕರಾರು ಪತ್ರ ರದ್ದತಿ ಬರೆದು ಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಬೆಲೆ ಈಗ ಹೆಚ್ಚಾಗಿರುವ ಕಾರಣ ಕಿರಣ ಉಳ್ಳಾಗಡ್ಡಿ ಮತ್ತು ಪವನ ಸಾಳುಂಕೆರವರಿಗೆ ದಾವಾ ಆಸ್ತಿಯನ್ನು ಮರಳಿ

ಕೊಡುವ ಇಷ್ಟರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿಃ 01-06-2024 ರಂದು ಕಿರಣ ಉಳ್ಳಾಗಡ್ಡಿರವರು ಕರಾರು ರದ್ದತಿ ಮಾಡಿಕೊಡುತ್ತೇನೆ ಎಂದು ಪ್ರತಿವಾದಿರವರು ಈರಪ್ಪ ಅಂಬಿರವರ ಬಾಂಡ ರೈಟರ ಕಚೇರಿಗೆ ಕರೆಸಿದ್ದರು ಎಂದರೆ ಸರಿ. ಆಗ ಸದರಿ ರದ್ದತಿ ಪತ್ರದ ಜೊತೆ ನಿಪಿ-1 ನ್ನು ತಯಾರಿಸಿದ್ದರು ಎಂದರೆ ಸರಿಯಲ್ಲ. ನಾವು ಪ್ರತಿವಾದಿಗಳಿಗೆ ಸದರಿ ಖರೀದಿ ಕರಾರು ಪತ್ರ ರದ್ದತಿ ದಾಖಲೆ ಎಂದು ಹೇಳಿ ಮೊಸ ಮಾಡಿ ಅವರಿಂದ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಶಿಕ್ಷಿತರು ಆಗಿದ್ದು, ಅದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

8. 05-06-2024 ರಂದು ಬೇರೆ ದಾಖಲೆಗಳ ಜೊತೆ ನಿಪಿ-1 ಕ್ಕೆ ನಾವು ಮೊಸದಿಂದ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಒಟ್ಟು 11 ಜನ ವಾಸಿಸುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಕೂಲಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಅನಾರೋಗ್ಯದಿಂದ ಮನೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾ ಆಸ್ತಿ ಹೊರತು ಪಡಿಸಿ ವಾಸಿಸಲು ಬೇರೆ ಮನೆ ಇಲ್ಲಾ ಎಂದರೆ ಸರಿ. ಆದ್ದರಿಂದ ಪ್ರತಿವಾದಿಗಳು ಮನೆ ಮಾರಾಟ ಮಾಡುವ ಪ್ರಶ್ನೇ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1, ಪ್ರತಿವಾದಿಗಳು ಕಿರಣ ಉಳ್ಳಾಗಡ್ಡಿರವರಿಗೆ ಬರೆದುಕೊಟ್ಟ ದಾಖಲೆ, ಮತ್ತು ಅವರಿಗೆ ಬರೆದು ಕೊಟ್ಟ ರದ್ದತಿ ಪತ್ರಗಳನ್ನು ದಸ್ತವೇಜು ಬರಹಗಾರ ಈರಣ್ಣ ಅಂಬಿತಯಾರಿಸಿದ್ದಾರೆ ಎಂದರೆ, ಸಾಕ್ಷಿ ರದ್ದತಿ ಪತ್ರ ಮತ್ತು ನಿಪಿ-1 ನ್ನು ತಯಾರಿಸಿದ್ದು ಈರಣ್ಣ ಅಂಬಿ ಎಂದು ಗೊತ್ತಿದೆ. ರದ್ದತಿ ಪತ್ರಕ್ಕೆ ಸಾಕ್ಷಿದಾರರು ಆಗಿ ಸಹಿ ಮಾಡಿರುವ ವ್ಯಕ್ತಿಗಳೆ ನಿಪಿ-1 ಕ್ಕೆ ಸಾಕ್ಷಿ ಸಹಿ ಮಾಡಿದ್ದಾರೆ ಎಂದರೆ ಸರಿ.

9. 01-06-2024 ರಂದು ರದ್ದತಿ ಪತ್ರಕ್ಕೆ 1 ನೇ ಪ್ರತಿವಾದಿ ಗಂಡ ಹಣಮಂತರವರು ಸಹಿ ಮಾಡಿಲ್ಲ ಕಾರಣ ಅವರು ಅಂಬಿರವರ ಕಚೇರಿಗೆ ಬಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರ

ಮಾಡಿಕೊಂಡುವಂತೆ ಪ್ರತಿವಾದಿಗಳಿಗೆ ಹಿರಿಯರ ಮೂಲಕ 2-3 ಸಲ ಅವರ ಮನೆಗೆ ಹೋಗಿ ಕೇಳಿಕೊಂಡಿದ್ದೇನೆ ದಿನಾಂಕ ಗೊತ್ತಿಲ್ಲ. ನಾನು ನಿಪಿ-1 ನ್ನು ಮೊಸದಿಂದ ತಯಾರಿಸಿರುವ ಕಾರಣ ಪ್ರತಿವಾದಿಗಳಿಗೆ ಭೇಟಿಯಾಗಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ನೀಡಿರುವ ನೋಟಿಸು ಅವರಿಗೆ ತಲುಪಿಲ್ಲ ಆದ್ದರಿಂದ ಅವರು ಯಾವದೇ ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ವಾಟ್ಸಆಪ್ ಮೂಲಕ ಇಬ್ಬರಿಗೆ ನೋಟಿಸ ಕಳುಹಿಸಿದ್ದೇನೆ ಹೆಸರುಗಳು ನೆನಪಿಲ್ಲ. ನಾನು ರೂ. 7,50,000/- ರೂಪಾಯಿ ಹಣ ಇಟ್ಟುಕೊಂಡು ಪ್ರತಿವಾದಿಗಳಿಗೆ ನೋಟಿಸ ಕಳುಹಿಸಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನನ್ನ ಹತ್ತಿರ ರೂ.7,50,000/- ಹಣ ಇದ್ದ ಬಗ್ಗೆ ತೊರಿಸುವ ದಾಖಲೆ ಹಾಜರಪಡಿಸಿಲ್ಲ, ಆದರೆ ಮುಂದೆ ಹಾಜರಪಡಿಸುತ್ತೇನೆ ಎಂದು ಹೇಳುತ್ತಾರೆ. ನನ್ನ ಹತ್ತಿರ ಯಾವತ್ತು ಅಷ್ಟು ಹಣ ಇರಲಿಲ್ಲಿ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಜೊತೆ ಯಾವುದೇ ವ್ಯವಹಾರ ಮಾಡದೇ ಇದ್ದರು ಮತ್ತು ಅವರು ನಿಪಿ-1 ನ್ನು ಬರೆದು ಕೊಡದೇ ಇದ್ದರು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ